ಸಂಖ್ಯೆ: ಬಿಎಂಆರ್‌ಸಿಎಲ್/ಸಿಪಿಆರ್‌ಒ/ಪತ್ರಿಕಾ ಪ್ರಕಟಣೆ /2020-21 ದಿನಾಂಕ: 02-09-2020

**ಪತ್ರಿಕಾ ಪ್ರಕಟಣೆ**

**ವಿಷಯ: ನಮ್ಮ ಮೆಟ್ರೋ ರೈಲು ಸೇವೆಗಳನ್ನು ಪುನರಾರಂಭಿಸುವ ಬಗ್ಗೆ**

ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಉಂಟಾದ ಲಾಕ್‌ಡೌನ್ ನಿಂದಾಗಿ ನಮ್ಮ ಮೆಟ್ರೋ ಸೇವೆಗಳನ್ನು 2020ರ ಮಾರ್ಚ್ 22 ರಿಂದ ರದ್ದುಪಡಿಸಲಾಗಿತ್ತು. ಅನ್ಲಾಕ್ 4ರ ಅನ್ವಯ 2020ರ ಸೆಪ್ಟೆಂಬರ್ 7 ರಿಂದ ಹಂತ ಹಂತವಾಗಿ ಮೆಟ್ರೋ ಸೇವೆಗಳನ್ನು ಪುನರಾರಂಭಿಸಲು ಅನುಮತಿ ನೀಡಲಾಗಿದ್ದು, ನಮ್ಮ ಮೆಟ್ರೋ ಸೇವೆಗಳು 2020 ಸೆಪ್ಟಂಬರ್ 7 ರಿಂದ ಈ ಕೆಳಕಂಡಂತೆ ಪುನರಾರಂಭಗೊಳಿಸಲಾಗುತ್ತಿದೆ.

**ನೇರಳೆ ಮಾರ್ಗದಲ್ಲಿ:** 2020ರ ಸೆಪ್ಟೆಂಬರ್ 07 ರಿಂದ 10 ರವರೆಗೆ ರೈಲುಗಳು ಬೆಳಿಗ್ಗೆ 8 ರಿಂದ 11 ರವರೆಗೆ ಮತ್ತು ಸಂಜೆ 4.30 ರಿಂದ ರಾತ್ರಿ 7.30 ರವರೆಗೆ 5 ನಿಮಿಷಗಳ ಅಂತರದಲ್ಲಿ ಕಾರ್ಯನಿರ್ವಹಿಸುತ್ತವೆ.

**ಹಸಿರು ಮಾರ್ಗದಲ್ಲಿ**: 2020ರ ಸೆಪ್ಟೆಂಬರ್ 9 ಮತ್ತು 10 ರಂದು ರೈಲುಗಳು ಬೆಳಿಗ್ಗೆ 8 ರಿಂದ 11 ರವರೆಗೆ ಮತ್ತು ಸಂಜೆ 4.30 ರಿಂದ ರಾತ್ರಿ 7.30 ರವರೆಗೆ 5 ನಿಮಿಷಗಳ ಅಂತರದಲ್ಲಿ ಕಾರ್ಯನಿರ್ವಹಿಸುತ್ತವೆ.

2020 ಸೆಪ್ಟೆಂಬರ್ 11 ರಿಂದ ಜಾರಿಗೆ ಬರುವಂತೆ ರೈಲುಗಳು ಬೆಳಿಗ್ಗೆ 7 ರಿಂದ ರಾತ್ರಿ 9 ರವರೆಗೆ ಎರಡೂ ಮಾರ್ಗಗಳಲ್ಲಿ ಜನದಟ್ಟಣೆಯ ಸಮಯದಲಿ 5 ನಿಮಿಷಗಳ ಅಂತರದಲ್ಲಿ ಮತ್ತು ಬೇರೆ ಸಮಯದಲ್ಲಿ 10 ನಿಮಿಷಗಳ ಅಂತರದಲ್ಲಿ ಕಾರ್ಯನಿರ್ವಹಿಸಲಿವೆ.

ಮೇಲೆ ತಿಳಿಸಲಾದ ಸಮಯಗಳಲ್ಲಿ ಟರ್ಮಿನಲ್ ನಿಲ್ದಾಣಗಳಿಂದ ರೈಲುಗಳ ಸೇವೆಯು ಪ್ರಾರಂಭವಾಗುವುದು.

**ಮೆಟ್ರೊ ರೈಲುಗಳಲ್ಲಿ ಪ್ರಯಾಣಿಸಲು ಸುಲಭವಾಗುವಂತೆ ಈ ಕೆಳಗಿನ ಮಾಹಿತಿಗಳನ್ನು ಸಾರ್ವಜನಿಕರ ಗಮನಕ್ಕೆ ನೀಡಲಾಗಿದೆ:**

- ಟೋಕನ್ ಮಾರಾಟವನ್ನು ಅನುಮತಿಸದ ಕಾರಣ ನಿಲ್ದಾಣಗಳಿಗೆ ಪ್ರವೇಶಿಸಲು ಆನ್‌ಲೈನ್ ರೀಚಾರ್ಜ್‌ನೊಂದಿಗೆ ಮಾತ್ರ ಸ್ಮಾರ್ಟ್ ಕಾರ್ಡ್‌ಗಳಿಂದ ಪ್ರಯಾಣವನ್ನು ಅನುಮತಿಸಲಾಗುತ್ತದೆ.
- ಬಿ.ಎಂ.ಆರ್.ಸಿ.ಎಲ್ ಆವರಣದಲಿ ಫೇಸ್ ಮಾಸ್ಕ ಕಡ್ಡಾಯವಾಗಿದೆ.
- ಪ್ರತಿ ಪ್ರಯಾಣಿಕರಿಗೆ ನಿಲ್ದಾಣಗಳ ಪ್ರವೇಶದ್ವಾರದಲ್ಲಿ ಒದಗಿಸಲಾದ ಹ್ಯಾಂಡ್ ಸ್ಯಾನಿಟೈಜರ್‌ಗಳಿಂದ ಸಂಪೂರ್ಣವಾಗಿ ಸ್ವಚ್ಛ ಗೊಳಿಸಲು ಸೂಚಿಸಲಾಗುತ್ತದೆ ಮತ್ತು ತಮ್ಮದೇಯಾದ ಸ್ಯಾನಿಟೈಜರ್ ಅನ್ನು ಕೊಂಡೊಯ್ಯಲು ಪ್ರೋತ್ಸಾಹಿಸಲಾಗಿದೆ.
- ಪ್ರತಿ ಪ್ರಯಾಣಿಕರು ನಿಲ್ದಾಣದ ಪ್ರವೇಶದ್ವಾರದಲ್ಲಿ ಎಎಫ್‌ಸಿ ಗೇಟ್ ಪ್ರವೇಶ ಮತ್ತು ನಿರ್ಗಮನದ ಸಮಯದಲ್ಲಿ ಮತ್ತು ಪ್ಲಾಟ್‌ಫಾರ್ಮ್‌ನಲ್ಲಿ ಹಳದಿ ಗುರುತಿನ ಜಾಗದಲ್ಲಿಯೇ ನಿಲ್ಲಬೇಕು.
- ಎಲ್ಲಾ ಪ್ರಯಾಣಿಕರು ಕಡ್ಡಾಯವಾಗಿ 2 ಮೀಟರ್ ದೂರವನ್ನು ಕಯ್ದುಕೊಳ್ಳಬೇಕು.
- 50 ಕ್ಕೂ ಹೆಚ್ಚು ಪ್ರಯಾಣಿಕರನ್ನು ನಿಲ್ದಾಣಗಳಲ್ಲಿ ನಿಲ್ಲಲು ಅನುಮತಿಸಲಾಗುವುದಿಲ್ಲ. ನಿಲ್ದಾಣಗಳ ಪ್ರವೇಶವನ್ನು ಅದಕ್ಕೆ ಅನುಗುಣವಾಗಿ ನಿಯಂತ್ರಿಸಲಾಗುತ್ತದೆ.

---2-

- ಪ್ರತಿ ರೈಲಿನಲ್ಲಿ ಗರಿಷ್ಠ 400 ಪ್ರಯಾಣಿಕರಿಗೆ ಪ್ರಯಾಣಿಸಲು ಅನುಮತಿ ಇದೆ. ರೈಲು ಈಗಾಗಲೇ ಗರಿಷ್ಠ ಸಂಖ್ಯೆಯ ಪ್ರಯಾಣಿಕರನ್ನು ಹೊಂದಿದ್ದಲ್ಲಿ ಮುಂದಿನ ನಿಲ್ದಾಣದಲ್ಲಿ ನಿಲ್ಲಿಸಲಾಗುವುದಿಲ್ಲ.
- ರೈಲಿನಲ್ಲಿ ಪರ್ಯಾಯ ಆಸನಗಳನ್ನು ಖಾಲಿ ಇಡಬೇಕು ಮತ್ತು ಗುರುತಿಸಲಾದ ಪ್ರದೇಶಗಳಲ್ಲಿ ಮಾತ್ರ ಕೂರಲು ಮತ್ತು ನಿಲ್ಲಲು ಅವಕಾಶವಿದೆ.
- ಬೋರ್ಡಿಂಗ್ ಮತ್ತು ಡಿ-ಬೋರ್ಡಿಂಗ್ ಮಾಡುವಾಗ ಸಾಮಾಜಿಕ ಅಂತರವನವನು ಕಾಪಾಡಿಕೊಳ್ಳಲು ಪ್ರತಿ ನಿಲ್ದಾಣದಲ್ಲಿ ರೈಲುಗಳು 60 ಸೆಕೆಂಡುಗಳು ಮತ್ತು ಇಂಟರ್ಚೇಂಜ್ ನಿಲ್ದಾಣದಲ್ಲಿ 75 ಸೆಕೆಂಡುಗಳು ಮಾತ್ರ ನಿಲ್ಲುತ್ತವೆ.
- ಎಲ್ಲಾ ಪ್ರಯಾಣಿಕರನ್ನು ನಿಲ್ದಾಣದ ಪ್ರವೇಶ ದ್ವಾರದಲ್ಲಿ ದೇಹದ ಉಷ್ಣಾಂಶ ವನ್ನುಭದ್ರತಾ ಸಿಬ್ಬಂದಿಯಿಂದ ಪರೀಕ್ಷಿಸಲಾಗುವುದು.
- ಸುರಕ್ಷತಾ ದೃಷ್ಟಿಯಿಂದ ಪ್ರಯಾಣಿಕರು ಲೋಹದ ವಸ್ತುಗಳನ್ನು ಜೋಬಿನಲ್ಲಿ ಕೊಂಡೊಯ್ಯದಂತೆ ಸೂಚಿಸಲಾಗಿದೆ.
- ಎಸ್ಕಲೇಟರ್‌ಗಳನ್ನು ಬಳಸುವಾಗ ಪ್ರಯಾಣಿಕರು ತಮ್ಮ ಮುಂದಿರುವ ಪ್ರಯಾಣಿಕರಿಂದ ಒಂದು ಮೆಟ್ಟಿಲ ಅಂತರವನ್ನು ಕಾಯ್ದುಕೊಳ್ಳಲು ಸೂಚಿಸಿದೆ.
- ಲಿಫ್ಟಗಳಲ್ಲಿ 4 ಕ್ಕಿಂತ ಹೆಚ್ಚು ಪ್ರಯಾಣಿಕರು ಪ್ರಯಾಣಿಸಲು ಅನುಮತಿ ಇರುವುದಿಲ್ಲ.
- ಆರೋಗ್ಯ ಸೇತು ಆಪ್ ಬಳಕೆ ಕಡ್ಡಾಯವಲ್ಲದಿದ್ದರೂ ಪ್ರಯಾಣಿಕರ ಸುರಕ್ಷತೆಗಾಗಿ ಬಳಸಲು ಪ್ರೋತ್ಸಾಹಿಸಲಾಗುತ್ತದೆ.
- 65 ವರ್ಷಕ್ಕಿಂತ ಮೇಲ್ಪಟ್ಟ ವರು ಮತ್ತು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಅಗತ್ಯವಿದ್ದರೆ ಮಾತ್ರ ಪ್ರಯಾಣಿಸಲು ಸೂಚಿಸಲಾಗುತ್ತದೆ.

ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಇಲಾಖಾವತಿಯಿಂದ ಬಿಡುಗಡೆಯಾದಂತಹ ಎಸ್. ಒ.ಪಿ ಯ ಎಲ್ಲಾ ಮಾರ್ಗಸೂಚಿಗಳನ್ನು ಒಳಗೊಂಡಂತೆ ಬಿಎಂಆರ್‌ಸಿಎಲ್ ತನ್ನ ಎಸ್. ಒ.ಪಿ ಯನ್ನು ಸಂಪೂರ್ಣಮಾಹಿತಿಯೊಂದಿಗೆ ಸಾರ್ವಜನಿಕರ ಗಮನಕ್ಕಾಗಿ ನಾಳೆ ಬಿಡುಗಡೆ ಮಾಡಲಾಗುವುದು.

ಬಿಎಂಆರ್‌ಸಿಎಲ್ ತನ್ನ ಎಲ್ಲಾ ಪ್ರಯಾಣಿಕರನ್ನು ಬಿಎಂಆರ್‌ಸಿಎಲ್ ಭದ್ರತೆ, ಟಿಕೆಟಿಂಗ್, ಸ್ವಚ್ಛತೆ ಮತ್ತು ಇತರೆ ಸಿಬ್ಬಂದಿಯೊಂದಿಗೆ ಸಹಕರಿಸುವಂತೆ ಕೋರುತ್ತದೆ ಮತ್ತು ಕಾಲಕಾಲಕ್ಕೆ ಸರ್ಕಾರ ಹೊರಡಿಸಿದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕೋವಿಡ್-19 ಹರಡುವುದನ್ನು ತಡೆಯುವ ಹೋರಾಟದಲ್ಲಿ ಬಿಎಂಆರ್‌ಸಿಎಲ್ ಸಂಸ್ಥೆಯೊಂದಿಗೆ ಕೈಜೋಡಿಸಲು ಕೋರಿದೆ.

ಸಹಿ/-

**(ಬಿ.ಎಲ್.ಯಶವಂತ್ ಚವಾಣ್)**

ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ